# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1033

ಸದಸ್ಯರ ಹೆಸರು : ಶ್ರೀ ಟಿ.ಎನ್. ಜವರಾಯಿ ಗೌಡ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಕಳೆದ ಎರಡು ವರ್ಷಗಳಿಂದ ಆಗಿರುವ ನಷ್ಟದ ಪ್ರಮಾಣವೆಷ್ಟು; (ನಿಗಮವಾರು ಮಾಹಿತಿ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಕಳೆದ ಐದು ವರ್ಷಗಳಲ್ಲಿ ಅನುಭವಿಸಿರುವ ನಷ್ಟದ ವಿವರಗಳು ಈ ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ) (see table below) ... 2022-23ನೇ ಸಾಲಿನಲ್ಲಿ ಕರೋನಾ ಸಾಂಕ್ರಾಮಿಕ ಪಿಡುಗಿನಿಂದ ನಿಗಮಗಳು ಆರ್ಥಿಕ ಸಂಕಷ್ಟಕ್ಕೊಳಗಾದ ಹಿನ್ನೆಲೆಯಲ್ಲಿ ಸರ್ಕಾರವು ರೂ.2400 ಕೋಟಿ ವಿಶೇಷ ಅನುದಾನ ನೆರವು ನೀಡಿರುತ್ತದೆ. |
| ಆ. | ಈ ನಾಲ್ಕು ಸಾರಿಗೆ ನಿಗಮಗಳ ಅಧಿಕಾರಿ/ ನೌಕರರಿಗೆ ಇಲ್ಲಿಯವರೆಗೆ ಎಷ್ಟು ವೇತನ ಬಾಕಿ, ಪಿ.ಎಫ್., ನಿವೃತ್ತ ನೌಕರರ ಉಪಧನ, ರಜೆ ನಗದೀಕರಣ ಇನ್ನಿತರ ಬಾಕಿ ಉಳಿಸಿಕೊಂಡಿರುವ ಒಟ್ಟು ಮೊತ್ತವೆಷ್ಟು; ಇದನ್ನು ಯಾವಾಗ ಪಾವತಿ ಮಾಡಲಾಗುವುದು; | **ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ ಆಗಾಧವಾದ ಸಾಲದ ಹೊರೆಯಿತ್ತು ಹಾಗೂ ಸಾರಿಗೆ ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಬಾಕಿ ಮೊತ್ತ, ನಿವೃತ್ತ ನೌಕರರಿಗೆ ಉಪಧನ, ಬ್ಯಾಂಕ್ ಸಾಲ ಮತ್ತು ಸರಬರಾಜುದಾರರ/ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಹಾಗಾಗಿ, ಹೊಸ ಬಸ್ಸುಗಳನ್ನು ಖರೀದಿಸಲು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢಿಕರಿಸಿ ಕೊಳ್ಳಬೇಕಾಗಿತ್ತು.** |

| ಸಂಸ್ಥೆ | ವರ್ಷ | | | | |
|---|---|---|---|---|---|
| | 2019-20 | 2020-21 | 2021-22 | 2022-23 | 2023-24 |
| ಕ.ರಾ.ರ.ಸಾ.ನಿಗಮ | 157.56 | 581.15 | 423.31 | 42.89 | 295.43 |
| ಬೆಂ.ಮ.ಸಾ.ಸಂಸ್ಥೆ | 549.34 | 164.20 | 178.25 | 77.38 | 575.45 |
| ವಾ.ಕ.ರ.ಸಾ.ಸಂಸ್ಥೆ | 186.46 | 389.08 | 462.00 | 26.49 | 322.48 |
| ಕ.ಕ.ರ.ಸಾ.ನಿಗಮ | 89.27 | 186.45 | 225.82 | 114.98 | 161.12 |
| **ಒಟ್ಟು** | **982.63** | **1320.88** | **1289.38** | **261.74** | **1354.48** |



File No. TD/ 250/TCD/2024-Sec 11-Trans (Computer No. 2840787)

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |

| ವಿವರ | ಮಾರ್ಚ್-2023ರ ಅಂತ್ಯಕ್ಕೆ | ಏಪ್ರಿಲ್-2023ರಿಂದ ನವೆಂಬರ್-2024ರವರೆಗೆ | ನವೆಂಬರ್-2024ರ ಅಂತ್ಯಕ್ಕೆ |
| --- | --- | --- | --- |
| ಭವಿಷ್ಯ ನಿಧಿ | 1230.36 | 1764.10 | 2994.46 |
| ನಿವೃತ್ತ ನೌಕರರ ಬಾಕಿ | 549.15 | 76.25 | 625.40 |
| ಹಾಲಿ ಸಿಬ್ಬಂದಿಗಳ ಬಾಕಿ | 385.96 | -71.15 | 314.81 |
| ಇಂಧನ ಸರಬರಾಜುದಾರರಿಗೆ ಬಾಕಿ | 111.02 | 740.05 | 851.07 |
| ಸರಬರಾಜುದಾರರ ಮತ್ತು ಇತರೆ ಬಾಕಿ | 769.83 | 113.30 | 883.13 |
| ಸಾಲದ ಹೊಣೆಗಾರಿಕೆ | 1053.06 | -253.59 | 799.47 |
| ಒಟ್ಟು | 4099.38 | 2368.96 | 6468.34 |

2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ 2020ರ ವೇತನ ಪರಿಷ್ಕರಣೆಯನ್ನು ಮಾರ್ಚ್-2023ಕ್ಕೆ ಅನುಷ್ಠಾನಗೊಳಿಸಿದ್ದು, ಸದರಿ ಪರಿಷ್ಕರಣೆಯ ಹಿಂಬಾಕಿಯನ್ನು ಬಾಕಿ ಉಳಿಸಿಕೊಂಡಿರುತ್ತದೆ.

ಅಲ್ಲದೇ, ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act, 1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.

ಪ್ರಸ್ತುತ ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ಪಾವತಿಸುವ ಬಾಕಿ ಹೊಣೆಗಾರಿಕೆ ವಿವರ ಈ ಕೆಳಕಂಡಂತಿದೆ:

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
(ರೂ.ಕೋಟಿಗಳಲ್ಲಿ)
<table>
<tr><th>ನಿಗಮ/ ಸಂಸ್ಥೆ</th><th>ಮಾರ್ಚ್-2023ರ ಅಂತ್ಯಕ್ಕೆ</th><th>ನವೆಂಬರ್-2024ರ ಅಂತ್ಯಕ್ಕೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>163.63</td><td>172.67</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>235.91</td><td>434.02</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>413.20</td><td>182.65</td></tr>
<tr><td>ಕ.ಕ.ರ.ಸಾ.ನಿಗಮ</td><td>122.37</td><td>134.98</td></tr>
<tr><td>ಒಟ್ಟು</td><td>935.11</td><td>924.32</td></tr>
</table>
ಮುಂದಿನ ದಿನಗಳಲ್ಲಿ ನಿಗಮಗಳ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಸಾರಿಗೆ ನಿಗಮಗಳ ನೌಕರರಿಗೆ ಪಾವತಿಸಬೇಕಿರುವ ಬಾಕಿ ಮೊತ್ತ ಹಾಗೂ ನಿವೃತ್ತ ನೌಕರರಿಗೆ ಬಿಡುಗಡೆ ಮಾಡಬೇಕಿರುವ ಗ್ರಾಚ್ಯುಟಿ ಪಾವತಿಸಲು ಕ್ರಮ ವಹಿಸಲಾಗುವುದು.
ನಿಗಮಗಳು ಪ್ರಸ್ತುತ ಎದುರಿಸುತ್ತಿರುವ ಆರ್ಥಿಕ ಸಂಕಷ್ಟದಿಂದ ಹೊರಬರಲು ಹಾಗೂ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತವನ್ನು ಮರುಪಾವತಿಸಲು ಪಡೆಯುವ ಸಾಲಕ್ಕೆ ತಗಲುವ ಅಸಲು ಮತ್ತು ಬಡ್ಡಿ ಮೊತ್ತವನ್ನು ಸರ್ಕಾರವು ಭರಿಸಲು ಕೋರಿ, ಸಂಸ್ಥೆಗಳಿಗೆ ಸರ್ಕಾರದ ಸರ್ವೀಸ್ ಲೋನ್ (Government Service Loan) ಅನ್ನು ಪಡೆಯಲು ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆಯನ್ನು ಸಹ ಪರಿಶೀಲಿಸಲಾಗುತ್ತಿದೆ.
ಮುಂದುವರೆದು, ದಿನಾಂಕ:01.01.2020 ರಿಂದ 28.02.2023ರ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಬೇಕಾದ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಉಪಧನ ಹಾಗೂ ಗಳಿಕೆ ರಜೆ ನಗದೀಕರಣ ಪಾವತಿಗಾಗಿ ರೂ.224.05 ಕೋಟಿಗಳ ವಿಶೇಷ ಅನುದಾನವನ್ನು ಇತ್ತೀಚೆಗೆ ಬಿಡುಗಡೆಗೊಳಿಸಲಾಗಿದೆ.
</td></tr>
<tr><td>ಇ.</td><td>ಈ ನಾಲ್ಕು ಸಾರಿಗೆ ನಿಗಮಗಳಿಂದ ಇಲ್ಲಿಯವರೆಗೆ ಬಸ್ಸುಗಳ ಬಿಡಿಭಾಗಗಳ ಪೂರೈಕೆದಾರರಿಗೆ ಮತ್ತು ಇಂಧನ ಪೂರೈಕೆ ಮಾಡುವ ಕಂಪನಿಗಳಿಗೆ ಪಾವತಿಸ ಬೇಕಾಗಿರುವ ಒಟ್ಟು</td><td>ನಾಲ್ಕು ಸಾರಿಗೆ ನಿಗಮಗಳು ಇಲ್ಲಿಯವರೆಗೆ ಬಸ್ಸುಗಳ ಬಿಡಿಭಾಗಗಳ ಪೂರೈಕೆದಾರರಿಗೆ ಮತ್ತು ಇಂಧನ ಪೂರೈಕೆ ಮಾಡುವ ಕಂಪನಿಗಳಿಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತದ ವಿವರಗಳು ಕೆಳಕಂಡಂತಿದೆ:</td></tr>
</table>

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಮೊತ್ತವೆಷ್ಟು; (ವಿವರ ನೀಡುವುದು)</td><td>
(ರೂ.ಕೋಟಿಗಳಲ್ಲಿ)
<table>
<tr><th>ನಿಗಮ/ ಸಂಸ್ಥೆ</th><th>ಮಾರ್ಚ್-2023ರ ಅಂತ್ಯಕ್ಕೆ</th><th>ನವೆಂಬರ್-2024ರ ಅಂತ್ಯಕ್ಕೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>59.27</td><td>301.99</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>106.06</td><td>475.52</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>31.08</td><td>155.54</td></tr>
<tr><td>ಕ.ಕ.ರ.ಸಾ.ನಿಗಮ</td><td>44.05</td><td>124.26</td></tr>
<tr><td>ಒಟ್ಟು</td><td>240.46</td><td>1057.31</td></tr>
</table>
</td></tr>
<tr><td>ಈ.</td><td>2023-2024 ಮತ್ತು 2024-2025ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಲಾಗಿದೆ; ಮತ್ತು ಇದೇ ಅವಧಿಯಲ್ಲಿ ಹೊಸದಾಗಿ ಎಷ್ಟು ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ;</td><td>
ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ.<br><br>
ಪ್ರಸ್ತುತ 2023-24 ಹಾಗೂ 2024-25ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಲ್ಲಿ ಖರೀದಿಸಲಾದ/ ಖರೀದಿಸಲಾಗುವ ಬಸ್ಸುಗಳ ವಿವರ ಕೆಳಗಿನಂತಿರುತ್ತದೆ:
<table>
<tr><th>ಸಂಸ್ಥೆ</th><th>ಸೇರ್ಪಡೆಯಾದ ಬಸ್‌ಗಳ ಸಂಖ್ಯೆ</th><th>ಸೇರ್ಪಡೆಗೊಳಿಸ-ಲಾಗುತ್ತಿರುವ ಬಸ್‌ಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>1118</td><td>20</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1510</td><td>699</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>662</td><td>554</td></tr>
<tr><td>ಕ.ಕ.ರ.ಸಾ.ನಿಗಮ</td><td>1014</td><td>73</td></tr>
<tr><td>ಒಟ್ಟು</td><td>4304</td><td>1346</td></tr>
</table>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:<br>
2000 ಚಾಲಕ-ಕಂ-ನಿರ್ವಾಹಕ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. ಅಲ್ಲದೇ, ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ 194 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>
ಶಕ್ತಿ ಯೋಜನೆ ಅನುಷ್ಠಾನಗೊಂಡ ದಿನಾಂಕದಿಂದ ನಿಗಮದಿಂದ 867 ಪುನಶ್ಚೇತನಗೊಳಿಸಿದ ಬಸ್ಸುಗಳನ್ನು ನಿಗಮದ ವ್ಯಾಪ್ತಿಯ ವಿಭಾಗಗಳಿಗೆ ನಿಯೋಜಿಸಲಾಗಿರುತ್ತದೆ.
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಶಕ್ತಿ ಯೋಜನೆ ಜಾರಿಗೂ ಮೊದಲು ನಿಗಮದ ವತಿಯಿಂದ 45255 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 50083 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿದಿನ 4828 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**<br><br>ಸಂಸ್ಥೆಯಲ್ಲಿ ಪ್ರಸ್ತುತ 2500 ನಿರ್ವಾಹಕ, ದರ್ಜೆ-3 ಹುದ್ದೆಯ ಮೂಲ ದಾಖಲಾತಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅಲ್ಲದೇ, ಅನುಕಂಪದ ಆಧಾರದ ಮೇಲೆ ಚಾಲಕ / ನಿರ್ವಾಹಕರು ಒಳಗೊಂಡಂತೆ ಒಟ್ಟಾರೆಯಾಗಿ 306 ವಿವಿಧ ವೃಂದದ ಹುದ್ದೆಗಳಿಗೆ ನೇಮಕ ಮಾಡಲಾಗಿದೆ.<br><br>ಸಂಸ್ಥೆಯು ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5,808 ಅನುಸೂಚಿಗಳನ್ನು 60,754 ಸುತ್ತುವಳಿಗಳೊಂದಿಗೆ 11.93 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.<br><br>ಸಂಸ್ಥೆಯಲ್ಲಿ ಶಕ್ತಿ ಯೋಜನೆ ಜಾರಿಗೆ ಮೊದಲು ಸಂಸ್ಥೆಯಲ್ಲಿ 5,555 ಅನುಸೂಚಿಗಳಿಂದ 56,646 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ ಪ್ರಸ್ತುತ 5,808 ಅನುಸೂಚಿಗಳಿಂದ 60,754 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಒಟ್ಟು 253 ಅನುಸೂಚಿಗಳನ್ನು ಹಾಗೂ 4,108 ಸುತ್ತುವಳಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**<br><br>ಈಗಾಗಲೇ 2000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಅದರಂತೆ, 1000 ಚಾಲನಾ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಸದರಿ ನೇಮಕಾತಿ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಉಳಿದ 1000 ಚಾಲನಾ ಸಿಬ್ಬಂದಿಗಳ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗುವುದು. ಅಲ್ಲದೇ ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ ಒಟ್ಟು 391 ವಿವಿಧ ವೃಂದಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಶಕ್ತಿ ಯೋಜನೆ ಜಾರಿಗೂ ಮೊದಲು 4567 ಅನುಸೂಚಿಗಳಿಂದ 34676 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿ ನಂತರ ಅಂದರೆ ಅಕ್ಟೋಬರ್-2024ರ ಮಾಹೆಯ ಅಂತ್ಯಕ್ಕೆ 4668 ಅನುಸೂಚಿಗಳಿಂದ 36654 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿ ದಿನ 104 ಅನುಸೂಚಿಗಳನ್ನು ಹಾಗೂ ಒಟ್ಟು 1978 ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸಂಸ್ಥೆಯಲ್ಲಿನ ಲಭ್ಯವಿರುವ ಸಂಪನ್ಮೂಲಗಳಿಂದ 104 ಅನುಸೂಚಿಗಳನ್ನು ಹೆಚ್ಚಿಸುವುದಲ್ಲದೇ ಜೂನ್-23ರ ನಂತರದ ಅವಧಿಯಲ್ಲಿ 140 ಅಂತರ ರಾಜ್ಯ ಸಾರಿಗೆಗಳನ್ನು ಸ್ಥಗಿತಗೊಳಿಸಿ ಸದರಿ ವಾಹನಗಳನ್ನೂ ಸಹ ರಾಜ್ಯದೊಳಗೆ ಕಾರ್ಯಾಚರಣೆಗೆ ಬಳಸಿಕೊಂಡು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಚಾಲನಾ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಹೊರಗುತ್ತಿಗೆ ಆಧಾರದ ಮೇಲೆ 400 ಚಾಲಕರನ್ನು ಪಡೆಯಲಾಗಿದೆ. ಇನ್ನೂ 500 ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.<br><br>2024-25ನೇ ಸಾಲಿನ ಅಂತ್ಯಕ್ಕೆ 4745 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜನೆ ರೂಪಿಸಲಾಗಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ಪ್ರಸ್ತುತ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಇತರೆ 121 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ನಿಗಮದಲ್ಲಿ ಶಕ್ತಿ ಯೋಜನೆ ಜಾರಿ ಪೂರ್ವ 4028 ಅನುಸೂಚಿಗಳೊಂದಿಗೆ 22214 ಸರತಿಗಳನ್ನು ಕಾರ್ಯಾಚರಿಸಲಾಗುತ್ತಿದ್ದು, ಶಕ್ತಿ ಯೋಜನೆ ನಂತರ 4631 ಅನುಸೂಚಿಗಳೊಂದಿಗೆ 27030 ಸರತಿಗಳನ್ನು ಕಾರ್ಯಾಚರಿಸಲಾಗುತ್ತಿದೆ.<br><br>ಶಕ್ತಿ ಯೋಜನೆ ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 603 ಹೆಚ್ಚಿನ ಅನುಸೂಚಿಗಳಿಂದ 4816 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ನಾಲ್ಕೂ ಸಾರಿಗೆ ನಿಗಮಗಳಲ್ಲಿ 9000 ಚಾಲನಾ ಸಿಬ್ಬಂದಿಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದ್ದು, ಕ.ಕ.ರ.ಸಾ.ನಿಗಮದಲ್ಲಿ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಹಾಗೂ ಬೆಂ.ಮ.ಸಾ.ಸಂಸ್ಥೆಯಲ್ಲಿ 2000 ನಿರ್ವಾಹಕರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ. ಕ.ರಾ.ರ.ಸಾ.ನಿಗಮ ಹಾಗೂ ವಾ.ಕ.ರ.ಸಾ.ನಿಗಮದಲ್ಲಿ ದಾಖಲಾತಿಗಳ ಪರಿಶೀಲನೆ ಮುಗಿದಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ನಾಲ್ಕೂ ನಿಗಮಗಳು ಸೇರಿ ಇತರೆ 1012 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. |
| ಉ | ಈ ನಾಲ್ಕು ನಿಗಮಗಳಿಂದ ಶಕ್ತಿಯೋಜನೆ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೆ ಎಷ್ಟು ಜನ ಮಹಿಳೆಯರು ಉಚಿತವಾಗಿ | ದಿನಾಂಕ:11.06.2023 ರಿಂದ ನವೆಂಬರ್-2024ರವರೆಗೆ ನಾಲ್ಕು ಸಾರಿಗೆ ನಿಗಮಗಳಿಗೆ ಫಲಾನುಭವಿಗಳ ಸಂಖ್ಯೆ ಹಾಗೂ ಖರ್ಚಾಗಿರುವ ಮೊತ್ತದ ವಿವರ ಕೆಳಕಂಡಂತಿದೆ: |



File No. TD/250/TCQ/2024-Sec11-Trans (Computer No. 2540237)

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | ಪ್ರಯಾಣದ ಸೌಲಭ್ಯ ಪಡೆದಿದ್ದಾರೆ; ಇದಕ್ಕಾಗಿ ಖರ್ಚಾಗಿರುವ ಮೊತ್ತವೆಷ್ಟು; (ನಿಗಮವಾರು ಉತ್ತರ ನೀಡುವುದು) | (see table below) |

| ನಿಗಮ | ಫಲಾನುಭವಿಗಳ ಸಂಖ್ಯೆ (ಲಕ್ಷಗಳಲ್ಲಿ) | ಖರ್ಚಾಗಿರುವ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಕ.ರಾ.ರ.ಸಾ.ನಿಗಮ | 10661.32 | 2481.94 |
| ಬೆಂ.ಮ.ಸಾ.ಸಂಸ್ಥೆ | 10876.21 | 1126.06 |
| ವಾ.ಕ.ರ.ಸಾ.ಸಂಸ್ಥೆ | 7897.51 | 1613.68 |
| ಕ.ಕ.ರ.ಸಾ.ನಿಗಮ | 4991.34 | 1321.41 |
| **ಒಟ್ಟು** | **34426.38** | **6543.08** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಊ | ನಷ್ಟದಲ್ಲಿರುವ ಈ ನಾಲ್ಕು ನಿಗಮಗಳನ್ನು ಲಾಭ ನಷ್ಟಕ್ಕಿಂತ ಸಾರ್ವಜನಿಕ ಸೇವೆ ಎಂದು ಭಾವಿಸಿ ನಷ್ಟ ರಹಿತದ ಕಡೆಗೆ ತರಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು? (ವಿವರ ನೀಡುವುದು) | ನಾಲ್ಕು ಸಾರಿಗೆ ಸಂಸ್ಥೆಗಳ ನಷ್ಟವನ್ನು ಸರಿದೂಗಿಸಲು ಸರ್ಕಾರವು ಈ ಕೆಳಕಂಡಂತೆ ವಿಶೇಷ ಆರ್ಥಿಕ ಸಹಾಯವನ್ನು ಒದಗಿಸಿದೆ: |

**2023-24ನೇ ಸಾಲಿನ ವಿಶೇಷ ಬಂಡವಾಳ ನೆರವು ಅಡಿ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ರೂ.60000.00 ಲಕ್ಷಗಳ ವಿಶೇಷ ಬಂಡವಾಳ ನೆರವನ್ನು ಒದಗಿಸಲಾಗಿದ್ದು,** ನಿಗಮವಾರು ವಿವರ ಕೆಳಕಂಡಂತಿದೆ:

**(ರೂ.ಕೋಟಿಗಳಲ್ಲಿ)**

| ಸಂಸ್ಥೆಗಳು | ನಿಗದಿಪಡಿಸಿದ ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 100.00 |
| ಬೆಂ.ಮ.ಸಾ.ಸಂಸ್ಥೆ | 150.00 |
| ವಾ.ಕ.ರ.ಸಾ.ಸಂಸ್ಥೆ | 650.00 |
| ಕ.ಕ.ರ.ಸಾ.ನಿಗಮ | 100.00 |
| **ಒಟ್ಟು** | **600.00** |

2023-24ನೇ ಸಾಲಿನಲ್ಲಿ ನಾಲ್ಕು ಸಾರಿಗೆ ಸಂಸ್ಥೆಗಳು ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ಮೊತ್ತಕ್ಕೆ ವಿನಾಯಿತಿ ನೀಡಲಾಗಿದ್ದು, ವಿವರ ಕೆಳಕಂಡಂತಿದೆ:

**(ರೂ.ಕೋಟಿಗಳಲ್ಲಿ)**

| ಸಂಸ್ಥೆಗಳು | ವಿನಾಯಿತಿ ನೀಡಿದ ಮೋಟಾರು ವಾಹನ ತೆರಿಗೆ ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 243.52 |
| ಬೆಂ.ಮ.ಸಾ.ಸಂಸ್ಥೆ | 119.88 |
| ವಾ.ಕ.ರ.ಸಾ.ಸಂಸ್ಥೆ | 103.91 |
| ಕ.ಕ.ರ.ಸಾ.ನಿಗಮ | 114.16 |
| **ಒಟ್ಟು** | **581.47** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮುಂದುವರೆದು, ದಿನಾಂಕ:01.01.2020 ರಿಂದ 28.02.2023ರ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಬೇಕಾದ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಉಪಧನ ಹಾಗೂ ಗಳಿಕೆ ರಜೆ ನಗದೀಕರಣ ಪಾವತಿಗಾಗಿ ರೂ.**224.05** ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.<br><br>ಅಲ್ಲದೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಸಂಸ್ಥೆಗಳನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡ ಕ್ರಮಗಳನ್ನು ಅನುಬಂಧ ರಲ್ಲಿ ನೀಡಲಾಗಿದೆ |

ಸಂಖ್ಯೆ: ಟಿಡಿ 250 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ

## ನಾಲ್ಕು ನಿಗಮಗಳನ್ನು ನಷ್ಟ ರಹಿತದ ಕಡೆಗೆ ತರಲು ಸರ್ಕಾರ ರೂಪಿಸಿರುವ ಯೋಜನೆಗಳ ವಿವರ ಕೆಳಗಿನಂತಿರುತ್ತದೆ:

### ಕ.ರಾ.ರ.ಸಾ.ನಿಗಮ:

ಕ.ರಾ.ರ.ಸಾ.ನಿಗಮವು ಸರ್ಕಾರದ ಸಾಮಾಜಿಕ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ, ವಿದ್ಯಾರ್ಥಿಗಳು, ಹಿರಿಯನಾಗರೀಕರು ಹಾಗೂ ಇತರೆ ವರ್ಗದ ವಿವಿಧ ನಾಗರೀಕರಿಗೆ ಉಚಿತ/ ರಿಯಾಯಿತಿ ದರದಲ್ಲಿ ಪ್ರಯಾಣ ಸೌಲಭ್ಯ ಹಾಗೂ ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೇವೆಯನ್ನು ನೀಡುವ ಉದ್ದೇಶದಿಂದ ಕಾರ್ಯ ನಿರ್ವಹಿಸುತ್ತಿರುವ ಸೇವಾ ಸಂಸ್ಥೆಯಾಗಿರುತ್ತದೆ.

ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ:

- ನಿಗಮದಲ್ಲಿ ಕ್ರೂಢೀಕೃತವಾದ ಹಿಂಬಾಕಿ ಮೊಬಲಗನ್ನು ಪಾವತಿಸಲು ಕ.ರಾ.ರ.ಸಾ.ನಿಗಮಕ್ಕೆ 2021-22ನೇ ಸಾಲಿನಲ್ಲಿ ರೂ.200.00 ಕೋಟಿಗಳು, 2022-23ನೇ ಸಾಲಿನಲ್ಲಿ ರೂ.555.00 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿದೆ.
- ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು 2021-22, 2022-23, 2023-24ನೇ ಸಾಲಿನಲ್ಲಿ ಅನುಕ್ರಮವಾಗಿ ರೂ.38.36 ಕೋಟಿ, ರೂ.30.00 ಕೋಟಿ ಹಾಗೂ 40.00 ಕೋಟಿಗಳ ಅನುದಾನ ಹಾಗೂ ಹೊಸ ವಾಹನ ಖರೀದಿಗಾಗಿ 2023-24ನೇ ಸಾಲಿನಲ್ಲಿ ನಿಗಮಕ್ಕೆ ರೂ.100.00 ಕೋಟಿಗಳ ವಿಶೇಷ ಬಂಡವಾಳ ಅನುದಾನವನ್ನು ನೀಡಿರುತ್ತದೆ.
- ನಿಗಮದ ನಗದು ಕೊರತೆಯನ್ನು ನಿಭಾಯಿಸಲು 2021-22ನೇ ಸಾಲಿನಲ್ಲಿ ನಿಗಮವು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.112.76 ಕೋಟಿಗಳ ಹಾಗೂ 2023-24ನೇ ಸಾಲಿನ ರೂ.243.52 ಕೋಟಿಗಳ ಪಾವತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ ಹಾಗೂ 2022-23ನೇ ಸಾಲಿನಲ್ಲಿ ನಿಗಮವು ಪಾವತಿಸ ಬೇಕಾದ ಮೋಟಾರು ವಾಹನ ತೆರಿಗೆ ರೂ193.61 ಕೋಟಿಗಳನ್ನು ನಿಗಮದ ಹಣಕಾಸು ಪರಿಸ್ಥಿತಿ ಉತ್ತಮಗೊಂಡ ನಂತರ (Retention of M.V.Tax payable) ಪಾವತಿ ಮಾಡಲು ಮುಂದೂಡಿ ಆದೇಶಿಸಿದೆ.

ಇದಲ್ಲದೆ, ನಿಗಮವನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡ ಇನ್ನಿತರ ಕ್ರಮಗಳ ವಿವರ ಕೆಳಗಿನಂತಿರುತ್ತದೆ:

- ಕ.ರಾ.ರ.ಸಾ.ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

- ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಪುದುಚೆರಿ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇದ್ದು, ಒಪ್ಪಂದಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ ರಾಜ್ಯಗಳ ಜೊತೆಗೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.
- ಕ.ರಾ.ರ.ಸಾ.ನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಜಾರಿಗೆ ತಂದಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್(ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೇಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಮೈಸೂರು ನಗರದ ನಗರ ಸಾರಿಗೆ ವಾಹನಗಳಲ್ಲಿ ಐ.ಟಿ.ಎಸ್(ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಘೋಷಣೆಯ ವ್ಯವಸ್ಥೆಯನ್ನು ಅಳವಡಿಸಲಾಗಿದೆ.(ಪ್ಯಾಸಂಜರ್ ಅನೌನ್ಸ್‌ಮೆಂಟ್ ಸಿಸ್ಟಮ್).
- ಚಾಲನಾ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ಘಟಕಗಳಲ್ಲಿ ಗಣಕೀಕೃತ ಡ್ಯೂಟಿರೋಟಾ ಸಿಸ್ಟಮ್‌ನ್ನು ಅಳವಡಿಸಿ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ನಿಗಮದ ಘಟಕಗಳಲ್ಲಿನ ಚಾಲನಾ/ತಾಂತ್ರಿಕ ಸಿಬ್ಬಂದಿಯ ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆ ತರಲು ರಜೆ ಪಡೆಯುವ ಸಿಬ್ಬಂದಿಗಳು ಮೊಬೈಲ್/ಗಣಕ ಯಂತ್ರಗಳ ಮೂಲಕ ರಜೆ ಪಡೆಯುವ ಗಣಕೀಕೃತ ರಜೆ ವ್ಯವಸ್ಥೆಯನ್ನು (Online Leave Management System)/HRMS ಅಳವಡಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 104 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಕ.ರಾ.ರ.ಸಾ.ನಿಗಮದ ವತಿಯಿಂದ ವಿವಿಧ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಇನ್ನೂ ಹಲವು ಪ್ರವಾಸಿ ತಾಣಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗುವುದು.
- ಸಾರಿಗೆ ನಿಗಮಗಳ ಆದಾಯ ವೃದ್ಧಿಯ ಭಾಗವಾಗಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಪಾರ್ಸಲ್ ಸೇವೆಗಳನ್ನು ದಿನಾಂಕ.01.03.2021 ರಿಂದ ಪ್ರಾರಂಭಿಸಲಾಗಿದೆ.
- ನಿಗಮದ ಖಾಲಿ ನಿವೇಶನಗಳಲ್ಲಿ ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ತೆರೆಯಲು ಸಾರ್ವಜನಿಕ ಸ್ವಾಮ್ಯದ ಆಸಕ್ತ ತೈಲ ಕಂಪನಿಯವರುಗಳಿಂದ ಟೆಂಡರ್ ಮೂಲಕ ಬಿಡ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
- ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಪ್ರಕ್ರಿಯೆ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ.
- ಕ.ರಾ.ರ.ಸಾ.ನಿಗಮದಲ್ಲಿ ಹೊಸ ತಾಂತ್ರಿಕತೆಯ ವಾಹನಗಳನ್ನು ಸೇರ್ಪಡೆಗೊಳಿಸಿ ಮಾರ್ಗ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.

- ಮಹಿಳಾ ಪ್ರಯಾಣಿಕರ ಸುರಕ್ಷತೆಗಾಗಿ ಬಸ್ಸುಗಳಲ್ಲಿ ಪ್ಯಾನಿಕ್ ಬಟನ್ ಸಿಸಿಟಿವಿ ಕಣ್ಗಾವಲು ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.
- UPI Payment ಹಾಗೂ Digital Pass ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಮಾಸಿಕ, ದಿನದ ಹಾಗೂ ವಾರದ ಪಾಸುಗಳನ್ನು ವಿತರಿಸಲಾಗುತ್ತಿದೆ.
- ಸಂಸ್ಥೆಯ ಹವಾನಿಯಂತ್ರಿತ ವಜ್ರ ಸೇವೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ದಿನಾಂಕ 01-01-2021 ರಿಂದ ಶೇ.21 ರಷ್ಟು ಪ್ರಯಾಣದರಗಳನ್ನು ಕಡಿಮಗೊಳಿಸಿ ಪರಿಷ್ಕರಿಸಲಾಗಿದೆ.
- ವಜ್ರ ಸಾರಿಗೆಯ ಮಾಸಿಕ ಪಾಸಿನ ದರ ರೂ.2363/- ರಿಂದ ರೂ.1800/- ಹಾಗೂ ದಿನದ ಪಾಸಿನ ದರ ರೂ.147/- ರಿಂದ ರೂ.120/- ಕ್ಕೆ ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.
- ಸಂಸ್ಥೆಯ ಹವಾನಿಯಂತ್ರಿತ ವಜ್ರ ಸೇವೆಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ದಿನಾಂಕ: 17-12-2021 ರಿಂದ ಶೇ.34.36 ರಷ್ಟು ಪ್ರಯಾಣದರಗಳನ್ನು ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.
- ಸಾಮಾನ್ಯ ಮಾಸಿಕ ಪಾಸುದಾರರು ಹಾಗೂ ಹಿರಿಯ ನಾಗರಿಕ ಮಾಸಿಕ ಪಾಸುದಾರರು ವಜ್ರ ಸೇವೆಗಳಲ್ಲಿ ಪ್ರಯಾಣಿಸಲು ಪ್ರತಿ ಸುತ್ತುವಳಿಗೆಳ ಟಿಕೇಟ್ ದರ ರೂ.25/- ಕ್ಕೆ ನಿಗದಿಪಡಿಸಿದೆಸಂಸ್ಥೆಯ ಹವಾನಿಯಂತ್ರಿತ ವಜ್ರ ಸೇವೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ದಿನಾಂಕ 01-01-2021 ರಿಂದ ಶೇ.21 ರಷ್ಟು ಪ್ರಯಾಣದರಗಳನ್ನು ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.
- ವಜ್ರ ಸಾರಿಗೆಯ ಮಾಸಿಕ ಪಾಸಿನ ದರ ರೂ.2363/- ರಿಂದ ರೂ.1800/- ಹಾಗೂ ದಿನದ ಪಾಸಿನ ದರ ರೂ.147/- ರಿಂದ ರೂ.120/- ಕ್ಕೆ ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.
- ಸಂಸ್ಥೆಯ ಹವಾನಿಯಂತ್ರಿತ ವಜ್ರ ಸೇವೆಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ದಿನಾಂಕ: 17-12-2021 ರಿಂದ ಶೇ.34.36 ರಷ್ಟು ಪ್ರಯಾಣದರಗಳನ್ನು ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.
- ಸಾಮಾನ್ಯ ಮಾಸಿಕ ಪಾಸುದಾರರು ಹಾಗೂ ಹಿರಿಯ ನಾಗರಿಕ ಮಾಸಿಕ ಪಾಸುದಾರರು ವಜ್ರ ಸೇವೆಗಳಲ್ಲಿ ಪ್ರಯಾಣಿಸಲು ಪ್ರತಿ ಸುತ್ತುವಳಿಗೆಳ ಟಿಕೇಟ್ ದರ ರೂ.25/- ಕ್ಕೆ ನಿಗದಿಪಡಿಸಿದೆ.

**ವಾ.ಕ.ರ.ಸಾ.ಸಂಸ್ಥೆ:**

- ಸಂಸ್ಥೆಯಲ್ಲಿ ಖಾಲಿ ನಿವೇಶನಗಳಲ್ಲಿ ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ತೆರೆಯಲು ಸಾರ್ವಜನಿಕ ಸ್ವಾಮ್ಯದ ಆಸಕ್ತ ತೈಲ ಕಂಪನಿಯವರುಗಳಿಂದ ಟೆಂಡರ್‌ಮೂಲಕ ಬಿಡ್‌ನ್ನು ಆಹ್ವಾನಿಸಲಾಗಿದ್ದು, ಎರಡು ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ಮಳಿಗೆ ತೆರೆಯಲು ಪರವಾನಗಿ ನೀಡಲಾಗಿದೆ. ಮಾಸಿಕ ರೂ. 4.00 ಲಕ್ಷಗಳ ಆದಾಯ ಗಳಿಸಲಾಗುತ್ತಿದೆ.
- ಸಂಸ್ಥೆಯ ವಿಶಾಲ ಸ್ಥಳಗಳಿಗೆ ಟೆಂಡರ್‌ಮೂಲಕ ಬಿಡ್‌ನ್ನು ಆಹ್ವಾನಿಸಿ, 24 ಮಳಿಗೆಗಳಿಗೆ ಪರವಾನಗಿ ನೀಡಲಾಗಿದೆ. ಮಾಸಿಕ ರೂ. 20.00 ಲಕ್ಷಗಳ ಆದಾಯ ಗಳಿಸಲಾಗುತ್ತಿದೆ.
- ಸಾರ್ವಜನಿಕ ಬೇಡಿಕೆಗನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಾಂದರ್ಭಿಕ ಒಪ್ಪಂದದ ಬಸ್ಸುಗಳನ್ನು ಒದಗಿಸಲಾಗುತ್ತಿದೆ.
- ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆದಾರರ ಆಯ್ಕೆ ಪ್ರಕ್ರಿಯೆ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ.
- ಸಂಸ್ಥೆಯ ವ್ಯಾಪ್ತಿಯಿಂದ ಪಣಜಿ, ಪುಣೆ, ಮುಂಬೈ, ಹೈದ್ರಾಬಾದ, ಕಲಬುರ್ಗಿ, ಬೀದರ, ಬಳ್ಳಾರಿ, ಮೈಸೂರು, ಮಂಗಳೂರು, ಬೆಂಗಳೂರು ಮಾರ್ಗಗಳಲ್ಲಿ ಹಾಗೂ ಹೊಸ ಮಾರ್ಗಗಳಲ್ಲಿ ಪ್ರತಿಷ್ಠಿತ ಸಾರಿಗೆಗಳನ್ನು ಅಳವಡಿಸಿ ಆದಾಯ ಹೆಚ್ಚಿಸಲು ಮೊಬೈಲ್ ಆಪ್ ಮೂಲಕ ಹಾಗೂ ಎಂ-ಬುಕಿಂಗ್, ಇ–ಬುಕಿಂಗ್, ಫ್ರಾಂಚೈಸಿ ಬುಕಿಂಗ್ ಹೆಚ್ಚಿಸಿ, ಹೆಚ್ಚಿನ ಪ್ರಚಾರ ಕೈಗೊಂಡು

- ಚಾಲನಾ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ವಾಹನ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಗಳನ್ನು ಹಮ್ಮಿಕೊಂಡು, ಉತ್ತಮ ಚಾಲನಾ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸಿ ಇಂಧನ ಕೆ.ಎಂ.ಪಿ.ಎಲ್. ವೃದ್ಧಿಸಲು ಹಾಗೂ ಸುರಕ್ಷತಾ ಚಾಲನಾ ಕುರಿತು ಕ್ರಮ ಕೈಗೊಳ್ಳಲಾಗಿರುತ್ತದೆ.
- ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳಿಗೆ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ಕಾಲಕಾಲಕ್ಕೆ ತರಬೇತಿ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು, ವಾಹನಗಳ ಉತ್ತಮ ತಾಂತ್ರಿಕ ನಿರ್ವಹಣಾ ವಿಧಾನಗಳನ್ನು ಅನುಸರಿಸಿ ಅವಘಡಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ವಾಹನಗಳಿಗೆ ಅವಶ್ಯಕತೆಗನುಗುಣವಾಗಿ ಅಗತ್ಯ ಬಿಡಿಭಾಗಗಳನ್ನು ಮೂಲ ತಯಾರಿಕಾ ಸಂಸ್ಥೆ ಹಾಗೂ ಸರಬರಾಜುದಾರರುಗಳಿಂದಲೇ ಉತ್ತಮ ಗುಣಮಟ್ಟದ ಬಿಡಿಭಾಗಗಳನ್ನು ಖರೀದಿಸಿ ವಾಹನಗಳಿಗೆ ಅಳವಡಿಸಲಾಗುತ್ತಿರುತ್ತದೆ.
- ಪ್ರಸ್ತುತ ನಿಗಮದಲ್ಲಿ ಹಳೆಯ ವಾಹನಗಳನ್ನು ಸಂಪೂರ್ಣ ನವೀಕರಣಗೊಳಿಸುವ ಅಂದರ ಪುನಶ್ಚೇತನ (refurbishing)ಗೊಳಿಸುವ ಕಾರ್ಯ ಜಾರಿಯಲ್ಲಿದ್ದು, ಸದರಿ ಕಾರ್ಯಕ್ರಮದಲ್ಲಿ ವಾಹನದ ಶಿಥಿಲಗೊಂಡ ಕವಚ/ಪ್ರಯಾಣಿಕರ ಆಸನ/ಗಾಜುಗಳು ಇವುಗಳನ್ನು ಸಂಪೂರ್ಣವಾಗಿ ಹೊಸ ಬಿಡಿಭಾಗಗಳೊಂದಿಗೆ ಬದಲಾಯಿಸಿ ಆಚರಣೆಗೊಳಿಸಲಾಗುತ್ತಿದೆ

**ಬೆಂ.ಮ.ಸಾ.ಸಂಸ್ಥೆ:**

'ಸಂಸ್ಥೆಯ ಆರ್ಥಿಕ ನಷ್ಟವನ್ನು ಪರಿಗಣಿಸಿ Opex différence in cost (Viability of Gap Funding-VGF) - 3055-00-190-0-03-100ನ ಲೆಕ್ಕಶೀರ್ಷಿಕೆಯಡಿ ರೂ.150.00 ಕೋಟಿಗಳ ಅನುದಾನವನ್ನು 2024-25ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿದ್ದು, ದಿ:30.11.2024ರ ಅಂತ್ಯಕ್ಕೆ ರೂ.39.97 ಕೋಟಿಗಳನ್ನು ಬಿಡುಗಡೆ ಮಾಡಿದೆ'.

- ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5,808 ಅನುಸೂಚಿಗಳನ್ನು 60,754 ಸುತ್ತುವಳಿಗಳೊಂದಿಗೆ 11.93 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.
- ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ, ಸಾರಿಗೆ ಸೇವೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.
- ಆಗಿಂದಾಗ್ಗೆ, ಪ್ರಯಾಣಿಕರ ಬೇಡಿಕೆ ಮತ್ತು ಅವಶ್ಯಕತೆಗನುಗುಣವಾಗಿ ಅನುಸೂಚಿಗಳ ಪರಿಷ್ಕರಣೆ/ವಿಸ್ತರಣೆ/ರದ್ದತಿಗೊಳಿಸಲಾಗುತ್ತಿದೆ.
- ಮೆಟ್ರೋ ರೈಲು ಪ್ರಯಾಣಿಕರಿಗೆ ಮೆಟ್ರೋ ರೈಲು ನಿಲ್ದಾಣದಿಂದ ವಾಸಸ್ಥಳಗಳಿಗೆ ತಲುಪಲು (first and last mile conncectivity) ಒಟ್ಟು 51 ಮಾರ್ಗಗಳಲ್ಲಿ 190 ಅನುಸೂಚಿಗಳನ್ನು 2500 ಮೆಟ್ರೋ ಫೀಡರ್ ಸೇವೆಗಳನ್ನು ಆಚರಣೆಗೊಳಿಸಲಾಗುತ್ತಿದೆ.
- ಪ್ರವಾಸಿಗರ ಅನುಕೂಲಕ್ಕಾಗಿ ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಈಶಾ ಫೌಂಡೇಷನ್ ಟೂರ್ ಪ್ಯಾಕೇಜ್ ಹಾಗೂ ಬೆಂಗಳೂರು ರೌಂಡ್ಸ್ ಸಾರಿಗೆಗಳನ್ನು ಪ್ರಾರಂಭಿಸಲಾಗಿದೆ.
- ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ಕೆಳಕಂಡಂತೆ ಕ್ರಮ ವಹಿಸಲಾಗಿದೆ.
- ಬಸ್ಸು/ಮಾರ್ಗಗಳ ವೇಳಾಪಟ್ಟಿ ಹಾಗೂ ಬಸ್ಸುಗಳ Live Tracking ಮಾಹಿತಿ ಲಭ್ಯವಾಗುವಂತೆ Mobile App ಅನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಬಸ್ ನಿಲುಗಡೆಗಳಲ್ಲಿ PIS Board ಗಳನ್ನು Install ಮಾಡಲಾಗಿದೆ.

ಪ್ರೋತ್ಸಾಹಕ ದರ ಮತ್ತು ರಿಯಾಯಿತಿಗಳ ಮಾಹಿತಿಯನ್ನು ಪ್ರಯಾಣಿಕರಿಗೆ ನೀಡಿ ಪ್ರಯಾಣಿಕರನ್ನು ಆಕರ್ಷಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರ ಬೇಡಿಕೆ, ಕನಿಷ್ಠ ಸಾರಿಗೆ ಸೌಲಭ್ಯವಿರುವ ಹೋಬಳಿ/ ಗ್ರಾಮಗಳಿಗೆ ಸಮರ್ಪಕ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಹಾಗೂ ರಸ್ತೆ ಸಂಪರ್ಕವಿಲ್ಲದ ಗ್ರಾಮಗಳ ರಸ್ತೆ ದುರಸ್ತಿಯಾದ ನಂತರ ಕಲ್ಪಿಸುವ ಸಾರಿಗೆಗಳು ಸೇರಿದಂತೆ ಸುಮಾರು 180 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ.

- ತಾಲ್ಲೂಕದಿಂದ ತಾಲ್ಲೂಕ ಕೇಂದ್ರಗಳಿಗೆ, ತಾಲ್ಲೂಕ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಹಾಗೂ ಜಿಲ್ಲಾ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಪಾಯಿಂಟ-ಟು-ಪಾಯಿಂಟ ಮಾದರಿಯಲ್ಲಿ ಸುಮಾರು 220 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ.

- ಪ್ರಯಾಣಿಕ ಸ್ನೇಹಿಯಾಗಿನಗದುರಹಿತ ವಹಿವಾಟನ್ನು ಪ್ರೋತ್ಸಾಹಿಸಲು Prepaid RFIDಕಾರ್ಡ ಬಳಸಿ ಪ್ರಯಾಣಿಸಲು ಬೆಳಗಾವಿ ನಗರದ ಆಯ್ದ ಮಾರ್ಗಗಳಲ್ಲಿ ಹಾಗೂ ಹುಬ್ಬಳ್ಳಿ ವಿಭಾಗದಲ್ಲಿUPI QR Code ಮೂಲಕ ನಗದುರಹಿತ ವಹಿವಾಟನ್ನು ಪ್ರಾರಂಭಿಸಲಾಗಿದ್ದು ಗದಗ ಹಾಗೂ ಬೆಳಗಾವಿ ವಿಭಾಗಗಳಿಗೂ ವಿಸ್ತರಿಸಲಾಗಿದೆ. ಇನ್ನುಳಿದ ಘಟಕಗಳಿಗೂ ವಿಸ್ತರಿಸುವ, ಕ್ರಮ ಜಾರಿಯಲ್ಲಿದೆ

- ಸಂಸ್ಥೆಯಲ್ಲಿ ಚಾಲನಾ ಸಿಬ್ಬಂದಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ಆದಾಯ ತರುವ ನಿಟ್ಟಿನಲ್ಲಿ ಪ್ರಸ್ತುತ 241 ಅನುಸೂಚಿಗಳನ್ನು ನಿರ್ವಾಹಕರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುಸೂಚಿಗಳನ್ನು ನಿರ್ವಾಹಕರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡುವ ಯೋಜನೆ ಇರುತ್ತದೆ.

- ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ತೆಲಂಗಾಣ ಹಾಗೂ ಆಂಧ್ರ ಪ್ರದೇಶಗಳೊಂದಿಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಅಲ್ಲದೇ ಮಹಾರಾಷ್ಟ್ರ, ಗೋವಾ, ತಮಿಳುನಾಡು ಹಾಗೂ ಗುಜರಾತ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇರುತ್ತದೆ. ಈ ರಾಜ್ಯಗಳ ಜೊತೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.

- ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಹುಬ್ಬಳ್ಳಿ-ಧಾರವಾಡ ನಗರ ಸಾರಿಗೆ (ಚಿಗರಿ) ವಾಹನಗಳಲ್ಲಿ ಐ.ಟಿ.ಎಸ್ ತಂತ್ರಾಂಶ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಉದ್ಘೋಷಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅವತಾರ್ (ಎಲ್ಲಿಯಾದರೂ ಯಾವುದೇ ಸಮಯದಲ್ಲಿ ಮುಂಗಡ ಕಾಯ್ದಿರಿಸುವಿಕೆ) ವ್ಯವಸ್ಥೆಯಡಿಯಲ್ಲಿ ಕರಾರಸಾನಿಗಮವು ಕಾರ್ಯಾಚರಿಸುವ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ.

- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸಂಸ್ಥೆಯ ಪ್ರಮುಖ 60 ಬಸ್ ನಿಲ್ದಾಣಗಳಲ್ಲಿ ವಾಹನ ಸಂಖ್ಯೆ, ನಿರ್ಗಮನ ವೇಳೆ, ತಲುಪುವ ವೇಳೆ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ನೀಡಲಾಗುತ್ತಿದೆ.

- ಸಂಸ್ಥೆಯ ಪ್ರಮುಖ ಸ್ಥಳಗಳಿಂದ ಬದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ, ಜೋಗ್ ಫಾಲ್ಸ್, ಗೋಕಾಕ್ ಫಾಲ್ಸ್, ಕಪ್ಪತಗುಡ್ಡ ಮುಂತಾದ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್ ವ್ಯವಸ್ಥೆಯನ್ನು ನಿರ್ದಿಷ್ಟ ಮಾಹೆಗಳಲ್ಲಿ ನೀಡಲಾಗುತ್ತಿದೆ.

- ಆದಾಯ ವೃದ್ಧಿಗೆ "ನಮ್ಮ ಕಾರ್ಗೋ" ಪಾರ್ಸಲ್ ಸೇವೆಯನ್ನು ಆರಂಭಿಸಲಾಗಿದೆ.

* ಸಂಸ್ಥೆಯ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ಖಾಲಿ ನಿವೇಶನ/ಕಟ್ಟಡಗಳನ್ನು ಬಾಡಿಗೆ ನೀಡಿ ವಾಣಿಜ್ಯ ಆದಾಯ ಹೆಚ್ಚಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.
* ಬಸ್ಸುಗಳ ಮೇಲೆ ಜಾಹೀರಾತು, ಬಸ್ ನಿಲ್ದಾಣಗಳಲ್ಲಿ ಹೋರ್ಡಿಂಗ್ಸ್ ಅಳವಡಿಕೆ, ಡಿಜಿಟಲ್ ಗ್ಲೋಸೈನ್ ಬೋರ್ಡ್, ವಿಡಿಯೋವಾಲ್ ಅಡ್ವರ್ಟೈಜ್‌ಮೆಂಟ್‌ಗಳ ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ.
* ಇದಲ್ಲದೇ, ಮಾನವ ಉತ್ಪಾದಕತೆಗೆ ಅಡ್ಡಿಯಾಗುತ್ತಿದ್ದ ಕೆಲವೊಂದು ವಿಷಯಗಳಲ್ಲಿ ತಂತ್ರಾಂಶಗಳನ್ನು ಅಳವಡಿಸಿ ಮಾನವ ಉತ್ಪಾದಕತೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದಾಹರಣೆಗೆ - 1) ಡ್ಯೂಟಿರೋಟಾ 2) ಗಣಕೀಕೃತ ರಜೆ ವ್ಯವಸ್ಥೆ 3) ಸಾರಿಗೆ ಸ್ಪಂದನ ಗಳನ್ನು ಅಳವಡಿಸಲಾಗಿದೆ.
* ಬೇಡಿಕೆಯಿರುವ ಮತ್ತು ಲಾಭದಾಯಕ ಮಾರ್ಗಗಳಲ್ಲಿ ಸಾರ್ವಜನಿಕ ಬೇಡಿಕೆ/ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

**ಕ.ಕ.ರ.ಸಾ.ನಿಗಮ:**

* ಘಟಕ/ ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯಗಳನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ / ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
* ಡಬಲ್ ಕ್ರ್ಯೂ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.
* ಅನಧಿಕೃತವಾಗಿ ಕಾರ್ಯಾಚರಣೆಯಲ್ಲಿರುವ ಜೀಪ್, ಕ್ರೂಜರ್ ಮುಂತಾದ ಖಾಸಗಿ ವಾಹನಗಳ ಕಾರ್ಯಾಚರಣೆ ನಿಯಂತ್ರಿಸಲು ಕ್ರಮ ಜರುಗಿಸುವಂತೆ ಕಾಲಕಾಲಕ್ಕೆ ಸರ್ಕಾರದ ಆಯುಕ್ತರಿಗೆ, ಜಿಲ್ಲಾಧಿಕಾರಿಗಳಿಗೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ, ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೋರಲಾಗುತ್ತಿದೆ.
* ಖಾಸಗಿ ವಾಹನಗಳಿಂದ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣ ದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳಿಗೆ ಆಕರ್ಷಿಸಲು ಕ್ರಮ ಜರುಗಿಸಲಾಗುತ್ತಿದೆ.
* ಉತ್ತಮ ಆದಾಯ ಬರುವ ಮಾರ್ಗಗಳಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
* ಕೆಲವು ಆಯ್ದ ಪ್ರಮುಖ ಮಾರ್ಗಗಳಲ್ಲಿ ಎಸಿ ಸ್ಲೀಪರ್ ಹಾಗೂ ನಾನ್ ಎಸಿ ಸ್ಲೀಪರ್ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
* ಸಾರಿಗೆ ಆದಾಯ ಸೋರಿಕೆಯಾಗದಂತೆ ಮಾರ್ಗ ತನಿಖಾ ಕಾರ್ಯವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಲಾಗುತ್ತಿದೆ.
* ಅನುಸೂಚಿಗಳಿಗೆ ಆದಾಯದ ಗುರಿಯನ್ನು ನಿಗದಿಪಡಿಸಿ, ಅದರಂತೆ ಆದಾಯವನ್ನು ಸಂದಾಯವಾಗುವಂತೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಿ ಆದಾಯ ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.
* ವಿಭಾಗ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಕುರಿತಂತೆ ಘಟಕ ವ್ಯವಸ್ಥಾಪಕರ ಮತ್ತು ಶಾಖಾ ಮುಖ್ಯಸ್ಥರ ವಾರಾಂತ್ಯ ಮತ್ತು ಮಾಸಾಂತ್ಯ ಸಭೆ ನಡೆಸಿ, ಸಾರಿಗೆ ಆದಾಯ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ವಿಭಾಗೀಯ ಅಧಿಕಾರಿಗಳು ಮೇಲಿಂದ ಮೇಲೆ ಘಟಕಗಳಿಗೆ ಭೇಟಿ ನೀಡಿ, ಕಡಿಮೆ ಆದಾಯ ಬರುವ ಅನುಸೂಚಿಗಳನ್ನು ಪರಿಶೀಲಿಸಿ, ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಜಾಹೀರಾತು ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರ ಬರೆದು ಚಾರ್ಟರ್ಡ್ ಸರ್ವಿಸ್ ಪಡೆದುಕೊಳ್ಳಲು ಕ್ರಮ ಜರುಗಿಸಲಾಗಿರುತ್ತದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ ಅಳವಡಿಸಿ ವಾಣಿಜ್ಯ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ತನಿಖಾ ತಂಡಗಳನ್ನು ನಿಯೋಜಿಸಿ, ಪ್ರಯಾಣಿಕರು ಟಿಕೇಟ್ ಪಡೆದಿರುವ ಬಗ್ಗೆ ನಿಯಮಿತವಾಗಿ ತನಿಖೆ ನಡೆಸುವ ಮೂಲಕ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿ ಎಲ್ಲಾ ಪ್ರಯಾಣಿಕರು ಟಿಕೇಟ್ ಪಡೆದು ಪ್ರಯಾಣಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕೇಂದ್ರ ಕಛೇರಿಯ ಮಟ್ಟದಲ್ಲಿ ವಿಭಾಗಗಳ ಕಾರ್ಯಾಚರಣೆಯ ಅಂಕಿ-ಅಂಶಗಳನ್ನು ಪರಿಶೀಲಿಸಿ, ಆದಾಯ ಹೆಚ್ಚಿಸಲು ವಿಭಾಗಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಮನಾಂತರ ಕಾರ್ಯಾಚರಣೆ ಯನ್ನು ಅಭ್ಯಸಿಸಿ, ಅನುಸೂಚಿಗಳನ್ನು ಪರಿಷ್ಕರಿಸಲು ಆಯಾ ವಿಭಾಗದವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.
- ಕೇಂದ್ರ ಕಛೇರಿ ಮಟ್ಟದಲ್ಲಿ ನಡೆಯುವ ಇಲಾಖಾ ಮುಖ್ಯಸ್ಥರ/ವಿಭಾಗೀಯ ನಿಯಂತ್ರಣಾಧಿಕಾರಿ ಗಳ/ವಿಭಾಗೀಯ ಸಂಚಾರ ಅಧಿಕಾರಿಗಳ ಸಭೆಯನ್ನು ಕಾಲಕಾಲಕ್ಕೆ ನಿಗಧಿ ಮಾಡಿ ಅಲ್ಲಿ ಅನುಸೂಚಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಇತ್ಯಾಧಿಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳುವಂತೆ ವಿಭಾಗೀಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿ, ಸಾರಿಗೆ ಆದಾಯ ಹೆಚ್ಚಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

*****